ದಿ.22.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ : ಶ್ರೀ ಎ.ಜೆ.ಹೆಚ್. ವಕೀಲರಿಂದ ವಾದಿಯ ಪರವಾಗಿ :

10. ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿವೆ ಮತ್ತು ಸತ್ಯವಾಗಿವೆ. ಅದಕ್ಕೆ ಸಹಿ ಮಾಡಿರುತ್ತೇನೆ. ಈ ಕೆಳಕಂಡ ದಾಖಲೆಗಳನ್ನು ಈ ದಿನ ನಿಶಾನೆಯಾಗಿ ಗುರುತಿಸಲಾಯಿತು.

1) Indent letter dated 07.12.2019 given by defendant - Ex.P.1.

2) Indent letter dated 11.12.2019 given by defendant - Ex.P.2.

3) Indent letter dated 03.01.2020 given by defendant - Ex.P.3.

4) Indent letter dated 13.01.2020 given by defendant - Ex.P.4.

5) Indent letter dated 20.02.2020 given by defendant - Ex.P.5.

6) Indent letter dated 24.02.2020 given by defendant - Ex.P.6.

7) Indent letter dated 01.03.2020 given by defendant - Ex.P.7.

8) Indent letter dated 07.03.2020 given by defendant – Ex.P.8.

9) Bill No.34 given by plaintiff to the defendant – Ex.P.9.

10) Bill No.40 given by plaintiff to the defendant – Ex.P.10.

11) Bill No.57 given by plaintiff to the defendant – Ex.P.11.

12) Bill No.63 given by plaintiff to the defendant – Ex.P.12.

13) Bill No.67 given by plaintiff to the defendant – Ex.P.13.

14) Bill No.73 given by plaintiff to the defendant – Ex.P.14.

15) Bill No.75 given by plaintiff to the defendant – Ex.P.15.

16) Bill No.77 given by plaintiff to the defendant – Ex.P.16.

17) Bill No.78 given by plaintiff to the defendant - Ex.P.17.

18) Bill No.103 given by plaintiff to the defendant - Ex.P.18.

19) Office copy of the notice dated 08.09.2020 - Ex.P.19.

20) Four postal acknowledgements - Ex.P.20 to P.23.

21) Letter to Village Panchayath of Pallagatte dated 13.07.2020 - Ex.P.24.

<u>ಪಾಟೀಸವಾಲು : ಶ್ರೀ ವೈ.ಹೆಚ್. ವಕೀಲರಿಂದ ಪ್ರತಿವಾದಿಯ ಪರವಾಗಿ</u> :

ಪ್ರತಿವಾದಿಯ ಪರ ವಕೀಲರು ಗೈರು ಹಾಜರು. ಆದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.09.03.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

**<u>ಪಾಟೀ ಸವಾಲು : ಶ್ರೀ ವೈ.ಎಚ್. ವಕೀಲರಿಂದ ಪ್ರತಿವಾದಿಯ ಪರವಾಗಿ</u>** : ಈ ದಿನ ಸಾಕ್ಷಿಯು ಹಾಜರಿದ್ದು, ಈ ಪ್ರಕಣವನ್ನು ಎರಡು ಬಾರಿ ಕೂಗಿಸಲಾಗಿ, ಪ್ರತಿವಾದಿ ಹಾಗೂ ವಕೀಲರು ಗೈರು ಹಾಜರಿ ಇದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.15.07.2024 ರಂದು ಸಾಕ್ಷಿಯನ್ನು ಪುನ: ಕರೆಸಿ ಪ್ರಮಾಣ ವಚನ ನೀಡಲಾಯಿತು.

**ಪಾಟೀಸವಾಲು : ಶ್ರೀ ವೈ.ಹೆಚ್, ವಕೀಲರಿಂದ ಪ್ರತಿವಾದಿಯ ಪರವಾಗಿ** :

11. ನಾನು ವಿದ್ಯುಚ್ಛಕ್ತಿ ಮತ್ತು ಪಂಪ್ ಸೆಟ್ ಉಪಕರಣಗಳ ಪೂರೈಕೆಯ ವ್ಯವಹಾರ ಮಾಡುತ್ತಿದ್ದೇನೆ. ನಾನು ಉನ್ನತಿ ಸಬ್ ಮರ್ಸಿಬಲ್ ಪಂಪ್ ಸೆಟ್ ಅಧಿಕೃತ ಡೀಲರ್ ಹಾಗೂ ಸಿಸ್ಕಾ ಬಲ್ಬ ಹಾಗೂ ಆರ್ಕೆ ಪ್ಲಂಬಿಂಗ್ ನ ಅಧಿಕೃತ ಡೀಲರ್ ಆಗಿದ್ದೇನೆ. ಈ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ಅಧಿಕೃತ ಡೀಲರ್ ಆದಲ್ಲಿ ನನಗೆ ಅಧಿಕೃತ ಡಿಲರ್ಶೀಫ್ ಸರ್ಟಿಫಿಕೇಟ್ ಕೊಡುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನಗೆ ಯಾವುದೇ ಡಿಲರ್ಶೀಫ್ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ಉಪಕರಣಗಳನ್ನು ನಾನು ಲೋಕಲ್ ಮತ್ತು ಸೆಕೆಂಡ್ ಸೇಲ್ ಉಪಕರಣಗಳನ್ನು ಮಾರಾಟ ಮಾಡುತ್ತೇನೆ ಎಂದರೆ ಸರಿಯಲ್ಲ.

12. ಅಧಿಕೃತ ಡೀಲರ್ ಆಗಿದ್ದಲ್ಲಿ ಕಂಪನಿಯಿಂದ ದರಪಟ್ಟಿಯನ್ನು ಕೊಡುತ್ತಾರೆ ಎಂದರೆ ಸರಿ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಾಜರುಪಡಿಸುವುದಾಗಿ ಹೇಳುತ್ತಾರೆ. ನಾನು ಬಿದಿರುಕೇರೆ, ಪಲ್ಲಗಟ್ಟೆ, ದೊಣ್ಣೆಹಳ್ಳಿ ಗ್ರಾಮ ಪಂಚಾಯಿತಿಗೆ ಸರಕುಗಳನ್ನು ಸರಬರಾಜು ಮಾಡಿದ್ದೇನೆ. ಈಗ ದೊಣ್ಣೆಹಳ್ಳಿ ಗ್ರಾಮ ಪಂಚಾಯತಿ ಮತ್ತು ಪಲ್ಲಗಟ್ಟೆ ಗ್ರಾಮ ಪಂಚಾಯಿತಿ ಮೇಲೆ ಪ್ರಕರಣವನ್ನು ಹೂಡಿದ್ದೇನೆ.

13. ಈ ಪ್ರಕರಣದಲ್ಲಿ ಪಲ್ಲಾಗಟ್ಟೆ ಪಂಚಾಯಿತಿಯಿಂದ ರೂ.4,72,829/- ಹಣ ಬರಬೇಕೆಂದು ಪ್ರಕರಣವನ್ನು ಹಾಕಿದ್ದೇನೆ. ಇದು 2019 ಡಿಸೆಂಬರ್ ನಿಂದ 2020 ಮಾರ್ಚ್ ರವರೆಗೆ ವ್ಯವಹಾರ ಆಗಿರುತ್ತದೆ. ಈ ಅವಧಿಯಲ್ಲಿ ನನಗೆ ಪಲ್ಲಗಟ್ಟೆ ಪಂಚಾಯಿತಿಯಿಂದ 12 – 13 ಇಂಡೆಂಟ್ ಗಳು ಬಂದಿದ್ದವು. ಇವುಗಳ ಪೈಕಿ ನಾನು 10 ಬಿಲ್ಲುಗಳನ್ನು ಸಲ್ಲಿಸಿದ್ದೇನೆ.

14. ನಿಪಿ.24 ರ ಪತ್ರದಲ್ಲಿ ದಿನಾಂಕ 09.01.2020 ರಿಂದ 08.03.2020 ರವರೆಗೆ ಒಟ್ಟು ರೂ.4,72,829/- ಹಣ ಪಾವತಿಸಲು ಕೋರಿದ್ದೇನೆ ಎಂದರೆ ಸರಿ. ಈ ಹಣದ ಬಗ್ಗೆ ನಾನು ನನ್ನ ವಕೀಲರ ಮೂಲಕ ನಿಪಿ.19 ರಂತೆ ನೋಟೀಸ್ ಕಳುಹಿಸಿದ್ದೇನೆ ಎನ್ನುವುದು ಸರಿ. ನಿಪಿ.19 ರ ನೋಟೀಸ್ ನಲ್ಲಿ ದಿನಾಂಕ 07.12.2019 ರಿಂದ 07.03.2020 ರವರೆಗೆ ರೂ.4,72,829/- ಹಣ ಪಾವತಿಸಬೇಕೆಂದು ನಮೂದು ಮಾಡಿದ್ದೇನೆ ಎಂದರೆ ಸರಿ. ನಿಪಿ.19 ರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿ ಇವೆ.

15. ಈ ಪ್ರಕರಣದಲ್ಲಿ ನಾನು ನಿಪಿ.1 ರಿಂದ ನಿಪಿ.8 ಎಂದು ಇಂಡೆಂಟ್ ಗಳನ್ನು ಗುರುತಿಸಿರುತ್ತೇನೆ ಎಂದರೆ ಸರಿ. ನಿಪಿ.9 ರಿಂದ ನಿಪಿ.18 ರವರೆಗೆ ಬಿಲ್ಲುಗಳನ್ನು ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ಬಿಲ್ಲುಗಳ ಮೇಲೆ ಯಾವುದೇ ದಿನಾಂಕವನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ.1 ರಿಂದ ನಿಪಿ.8 ರಂತೆ ಕೊಟ್ಟ ಇಂಡೆಂಟ್ ಪ್ರಕಾರ ಸರಕುಗಳನ್ನು ಸರಬರಾಜು ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ ಎನ್ನುವುದು ಸರಿಯಲ್ಲ.

16. ನಿಪಿ.1 ರಿಂದ ನಿಪಿ.8 ರಂತೆ ಯಾವುದೇ ಸರಕುಗಳನ್ನು ಸರಬರಾಜು ಮಾಡಿಲ್ಲ ಎಂದರೆ ಸರಿಯಲ್ಲ. ಸರಕುಗಳನ್ನು ಗ್ರಾಮ ಪಂಚಾಯಿತಿಯ ಪಿಡಿಓ ಮತ್ತು ಸಹಾಯಕರಿಗೆ ಕೊಟ್ಟಿದ್ದೇನೆ. ಅವರುಗಳ ಹೆಸರು ಡಿ.ಹೆಚ್. ಬಸವರಾಜು ಮತ್ತು ಗೋವರ್ದನ್ ಆಗಿರುತ್ತಾರೆ. ಸದರಿಯವರಿಗೆ ಯಾವ ಯಾವ ದಿನಾಂಕಗಳಂದು ಸರಕುಗಳನ್ನು ಸರಬರಾಜು ಮಾಡಿದ್ದೀರಾ ಎಂದರೆ ಡಿಸೆಂಬರ್ 2019 ರಿಂದ ಮಾರ್ಚ್ 2020 ರ ಅವಧಿಯೊಳಗೆ ಸರಬರಾಜು ಮಾಡಿದ್ದೇನೆ ಎಂದು ಹೇಳುತ್ತಾರೆ.

17. ಮೇಲ್ಕಂಡ ಬಸವರಾಜು ಮತ್ತು ಗೋವರ್ದನ್ ರವರಿಗೆ ಸರಕುಗಳನ್ನು ಸರಬರಾಜು ಮಾಡಿದ ಬಗ್ಗೆ ಅವರ ಸಹಿ ಪಡೆದ ದಾಖಲೆಗಳು ಇವೆಯಾ ಎಂದರೆ ಸಾಕ್ಷಿಯು ಪ್ರಸ್ತಾವನೆಯಲ್ಲಿ ಇವೆ ಎಂದು ಹೇಳುತ್ತಾರೆ. ಪಲ್ಲಗಟ್ಟೆ ಗ್ರಾಮ ಪಂಚಾಯಿತಿಗೆ ನಾನು ಯಾವುದೇ ಸರಕುಗಳನ್ನು ಸರಬರಾಜು ಮಾಡಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ಒಂದು ವರ್ಷದ ಅವಧಿಯ ಎಲ್ಲಾ ಬಿಲ್ಲುಗಳನ್ನು

ಮಾರ್ಚ್ ತಿಂಗಳಿನಲ್ಲಿ ಕ್ಲಿಯರ್ ಮಾಡುತ್ತಾರೆ ಎಂದರೆ ಸಾಕ್ಷಿಯು ನನಗೆ ಬರಬೇಕಾಗಿದ್ದು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಗ್ರಾಮ ಪಂಚಾಯಿತಿಯ ಪಿಡಿಓ ರವರ ಮೇಲಾಧಿಕಾರಿ ತಾಲ್ಲೂಕು ಪಂಚಾಯಿತಿಯವರಿಗೆ ಬಿಲ್ಲು ಬಾಕಿ ಇರುವ ಬಗ್ಗೆ ಅವರ ಗಮನಕ್ಕೆ ತಂದಿದ್ದೇನೆ. ಆ ಬಗ್ಗೆ ದಾಖಲೆ ಇದೆ. ಸದರಿ ದಾಖಲೆ ಯಾವುದೆಂದರೆ ನಿಪಿ.22 ಮತ್ತು ನಿಪಿ.23 ಎಂದು ಹೇಳುತ್ತಾರೆ.

18. ನಿಪಿ.22 ಮತ್ತು ನಿಪಿ.23 ಎಂದು ಗುರುತಿಸಲಾದ ಅಂಚೆ ಸ್ವಿಕೃತಿ ಪತ್ರಕ್ಕೆ ಪೂರಕವಾಗಿ ಕೊಟ್ಟ ನೋಟೀಸ್ ನಿಪಿ.19 ಆಗಿರುತ್ತದೆ. (ನಿಪಿ.19 ರಲ್ಲಿ copy forwarded to CEO and EO ಎಂದು ನಮೂದಾಗಿದೆ.) EO ಮತ್ತು CEO ರವರಿಗೆ ನೇರವಾಗಿ ಯಾವುದೇ ನೋಟೀಸನ್ನು ಕಳುಹಿಸಿಲ್ಲ ಎಂದರೆ ಸರಿ. ನಿಪಿ.19 ರಲ್ಲಿ ಇಂಡೆಂಟ್ ಮತ್ತು ಅದರ ದಿನಾಂಕವನ್ನು ನಮೂದಿಲ್ಲ ಎಂದರೆ ಸರಿ. ಕೇವಲ ಬಿಲ್ಲುಗಳನ್ನು ನಮೂದಿಸಿದ್ದು, ಬಿಲ್ಲುಗಳ ದಿನಾಂಕವನ್ನು ನಮೂದಿಸಿಲ್ಲ ಎಂದರೆ ಸರಿ.

19. ನಾನು ಇಂಡೆಂಟ್ ಪ್ರಕಾರ ಇಂತಿಷ್ಟು ಹಣ ಬರಬೇಕೆಂದು ಪ್ರತ್ಯೇಕವಾಗಿ ನಮೂದು ಮಾಡಿಲ್ಲ ಎನ್ನುವುದು ಸರಿಯಲ್ಲ. ಪಲ್ಲಾಗಟ್ಟೆ ಗ್ರಾಮಪಂಚಾಯಲ್ಲಿ ರೂ.4,72,829/- ಗಳ ವ್ಯವಹಾರ ಮಾಡಿದ್ದಕ್ಕೆ ಯಾವುದೇ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ. ಸದರಿ ವ್ಯವಹಾರವು ಖೊಟ್ಟಿ ವ್ಯವಹಾರ ಎಂದರೆ ಸರಿಯಲ್ಲ. ನನಗೆ ಯಾವುದೇ ಹಣ ಬರಬೇಕಾಗಿಲ್ಲದಿದ್ದರೂ ಸಹ ಅಕ್ರಮ ಲಾಭ ಪಡೆಯಲು ಸುಳ್ಳು ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

20. ನಿಪಿ.1 ರಿಂದ ನಿಪಿ.8 ರಂತೆ ಇಂಡೆಂಟ್ ಕೊಟ್ಟವರು ಯಾರೂ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಅಧಿಕಾರಿಗಳಲ್ಲ ಎನ್ನುವುದು ಸರಿಯಲ್ಲ. ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಲೀ, ಪಿಡಿಓ ಆಗಲೀ ಯಾರೂ ನನ್ನ ಬಳಿ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಗ್ರಾಮ ಪಂಚಾಯಿತಿಯ ಅಧ್ಯಕ್ಷರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಯಾವುದೇ ಚೆಕ್ಕನ್ನು ಕೊಡಬೇಕಾದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಿಡಿಓ ರವರು ಜಂಟಿಯಾಗಿ ಸಹಿ ಮಾಡಿ

ಕೊಡುತ್ತಾರೆ ಎಂದರೆ ಸರಿ. ನಾನು ಸಲ್ಲಿಸಿರುವ ಎಲ್ಲಾ ದಾಖಲೆಗಳು ಖೊಟ್ಟಿ ದಾಖಲೆಗಳು ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.